**ದಿನಾಂಕ:16.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ ಜಿ.ಎನ್.ಜಿ ವಕೀಲರಿಂದಃ**

7. ಚಿತ್ರದುರ್ಗದಿಂದ ಹುಡುಗಿಯನ್ನು ಕರೆದುಕೊಂಡು ಬಂದಿದ್ದ ಬಸವರಾಜ ಹನುಮಂತಪ್ಪ ಚೌಡಣ್ಣನವರ ಆರೋಪಿತರ ಸಂಬಂಧಿಕರು ಎಂದರೆ ಸರಿಯಲ್ಲ. ಸದರಿ ಹನುಮಂತಪ್ಪ ಚೌಡಣ್ಣನವರ ಆರೋಪಿತರಿಗೆ ಚಿಕ್ಕಪ್ಪನಾಗಬೇಕು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸರಿಯಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಸವರಾಜ ಹನುಮಂತಪ್ಪ ಚೌಡಣ್ಣನವರ ನನ್ನ ಸಂಬಂಧಿಕರಲ್ಲ ಮತ್ತು ನಮ್ಮ ಜಾತಿಯವರಲ್ಲ ಎಂದರೆ ನಿಜ. ಸದರಿ ಬಸವರಾಜ ಹನುಮಂತಪ್ಪ ಚೌಡಣ್ಣನವರ ಶೃತಿ ಎಂಬ ಕುರುಬರ ಜಾತಿಗೆ ಸೇರಿದ ಹುಡುಗಿಯನ್ನು ಚಿತ್ರದುರ್ಗದಿಂದ ಕರೆದುಕೊಂಡು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ.

8. ಪಂಚಾಯತಿ ಮಾಡುವ ಜಾಗದಲ್ಲಿ ಸುರೇಶಪ್ಪ, ಚಂದ್ರಪ್ಪ, 1 ನೇ ಆರೋಪಿ ಉಮೇಶ ಮತ್ತು ಮಂಜಪ್ಪ ಜಾನೇರ ಹಾಗೂ ಚೌಡಣ್ಣನವರ ಇದ್ದರು ಎಂದರೆ ನಿಜ. ಸದರಿ ಪಂಚಾಯತಿ ನಡೆಯುವಾಗ ನಾನು ಅನಾವಶ್ಯಕವಾಗಿ ಕುಡಿದು ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಬಸವರಾಜ ಹನುಮಂತಪ್ಪ ಚೌಡಣ್ಣನವರಿಗೆ ಬುದ್ದಿವಾದ ಹೇಳಿ ಸದರಿ ಹುಡುಗಿಯನ್ನು ಆಕೆಯ ಪೋಷಕರೊಂದಿಗೆ ಚಿತ್ರದುರ್ಗಕ್ಕೆ ಕಳಿಸಿಕೊಟ್ಟರು ಎಂದರೆ ಸರಿಯಲ್ಲ, ಆದರೆ ಪಂಚಾಯತಿ ಮಾಡಿದ ಯಜಮಾನರು ಕಳಿಸಿಕೊಟ್ಟಿರುತ್ತಾರೆ. ನಾನು ಕುಡಿದು ಗಲಾಟೆ ಮಾಡುವಾಗ ಊರಿನ ಹಿರಿಯರು ನನ್ನನ್ನು ಕರೆದು ಬುದ್ದಿವಾದ ಹೇಳಿದರು ಎಂದರೆ ಸರಿಯಲ್ಲ. ಆಗ ನಾನು 1 ನೇ ಆರೋಪಿಗೆ ಕೆಟ್ಟ ಶಬ್ದಗಳಿಂದ ಬೈದಿರುತ್ತೇನೆಂದರೆ ಸರಿಯಲ್ಲ.

9. 1 ನೇ ಆರೋಪಿಯು ಮನೆಯಲ್ಲಿದ್ದಾಗ ನಾನು ಮತ್ತು ಇತರರು ನಿನ್ನ ಜೊತೆ ಮಾತನಾಡುವುದು ಇದೆ ಬಾ ಎಂದು ಹೇಳಿ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ನಾವೆಲ್ಲರೂ ಸರ್ಕಲ್ ಗೆ ಕರೆದುಕೊಂಡು ಹೋಗಿ ನಾನು ಮತ್ತು ನನ್ನ ಮಕ್ಕಳು ಸೇರಿಕೊಂಡು 1 ನೇ ಆರೋಪಿಯ ಮೇಲೆ ಹಲ್ಲೆ ಮಾಡಿರುತ್ತೇವೆಂದರೆ ಸರಿಯಲ್ಲ. ಆಗ ಗಲಾಟೆ ಶಬ್ದ ಕೇಳಿ 1 ನೇ ಆರೋಪಿಯ ಹೆಂಡತಿ ಜಗಳ ಬಿಡಿಸಲು ಬಂದರು ಎಂದರೆ ಸರಿಯಲ್ಲ. ಆಗ ನಾನು 1 ನೇ ಆರೋಪಿಯ ಹೆಂಡತಿ ಬೈದು, ಸೀರೆ ಹಿಡಿದು ಎಳೆದಾಡಿ, ಕೈಗಳಿಂದ ಹಲ್ಲೆ ಮಾಡಿದೆ ಎಂದರೆ ಸರಿಯಲ್ಲ.

10. ಆಗ ಸ್ಥಳದಲ್ಲಿದ್ದ ಜನರು ನನಗೆ ಬೈದು ಬುದ್ದಿವಾದ ಹೇಳಿ ಕಳಿಸಿಕೊಟ್ಟರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಬಸವರಾಜ ಸಾವಜ್ಜಿ ರವರ ಪ್ರಚೋದನೆಗೆ ಒಳಪಟ್ಟು ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಡಲು ಹಲಗೇರಿ ಪೊಲೀಸ್ ಠಾಣೆಗೆ ಹೋದೆನು ಎಂದರೆ ಸರಿಯಲ್ಲ. ನಾನೇ ಕುಡಿದು ಬಿದ್ದು ಪೆಟ್ಟು ಹಚ್ಚಿಕೊಂಡು, ಚಿಕಿತ್ಸೆ ಪಡೆದು ಆರೋಪಿತರು ಹೊಡೆದಿದ್ದಾರೆಂದು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮೊದಲ ಸಲ ದೂರು ಕೊಡಲು ಹೋದಾಗ ಹಲಗೇರಿ ಪೊಲೀಸರು ನನಗೆ ಬೈದು ಬುದ್ದಿವಾದ ಹೇಳಿ ವಾಪಸ್ ಕಳಿಸಿಕೊಟ್ಟರು ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗುವಂತೆ ಪೊಲೀಸರ ಮೇಲೆ ಪ್ರಭಾವ ಬೀರಿ ಯಾವುದೋ ಕಲ್ಲನ್ನು ನಾನೇ ತೆಗೆದುಕೊಂಡು ಹೋಗಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಬೈದಿಲ್ಲ ಮತ್ತು ಹೊಡಿ–ಬಡಿ ಮಾಡಿಲ್ಲ ಹಾಗೂ ಜಾತಿ ನಿಂದನೆ ಮಾಡಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

11. 1ನೇ ಆರೋಪಿಯ ಹೆಂಡತಿ ನನ್ನ ಮತ್ತು ಇತರೆ 7 ಜನರ ಮೇಲೆ ದೂರು ಕೊಟ್ಟು ಅದು ಇದೇ ನ್ಯಾಯಾಲಯದ ಮುಂದೆ SC No.80/25 ರಡಿಯಲ್ಲಿ ವಿಚಾರಣೆ ನಡೆಯುತ್ತಿದೆ ಎಂದರೆ ನಿಜ. ಪ್ರಕರಣದ ಬಗ್ಗೆ ನಾನು ಸಮಾಜ ಕಲ್ಯಾಣ ಇಲಾಖೆಯಿಂದ ರೂ.75,000/–ಪರಿಹಾರ ಹಣವನ್ನು ಪಡೆದಿದ್ದೇನೆಂದರೆ ನಿಜ. ಸದರಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.